ಎಂಬ ವಿಶ್ವಾಸದೊಂದಿಗೆ ಅವನ ಮೊರೆಹೋದ. ಆದರೂ ಅವನು ಕಡೆಗಣ್ಣಿನಿಂದ ಮಹಿಳೆಯರ ಚಲನವಲನವನ್ನು ಮತ್ತು ಯುವಕರ ತಂಡವನ್ನು ನಿರುಕಿಸುತ್ತಲೇ ಇದ್ದ. ಯುವಕರು ತಮ್ಮ ತಮ್ಮಲ್ಲಿಯೇ ಏರುಧ್ವನಿಯಲ್ಲಿ ಮಾತನಾಡುತ್ತಾ ಸಾಕಷ್ಟು ಉತ್ಸಾಹಿತರಾಗಿದ್ದರು. ಅವರ ಮಾತಿನಿಂದ ತಿಳಿದುಬಂದ ಅಂಶವೆಂದರೆ, ಮೈಸೂರಿನಲ್ಲಿ ಆಯೋಜನೆ ಮಾಡಲಾಗಿದ್ದ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಲು ಅವರೆಲ್ಲರೂ ಹೊರಟಿದ್ದರು. ಕಾರುಗಳಲ್ಲಿ ಹೋಗುವುದಾದಲ್ಲಿ ನಾಲ್ಕೈದು ಜನಕ್ಕೆ ಮಾತ್ರ ಸೀಮಿತವಾಗುತ್ತಾರೆ ಎಂದು ಎಲ್ಲರೂ ಸೇರಿ ಒಟ್ಟಿಗೆ ಬಸ್ಸಿನಲ್ಲಿಯೇ ಹೋಗುವುದು ಸೂಕ್ತವೆಂದು ಕೊನೆ ಗಳಿಗೆಯಲ್ಲಿ ಅವರು ನಿರ್ಧರಿಸಿ ಆ ಬಸ್‌ಗೆ ದಾಳಿ ಇಟ್ಟಿದ್ದರು.

ಖಲಂದರ್ ಕಣ್ಣಿನ ನೋಟ ಮಾತ್ರ ಮುಂದಕ್ಕೆ ಕೀಲಿಸಿತ್ತು. ಆದರೆ, ಅವನ ಗಮನವೆಲ್ಲಾ ಬಸ್ಸಿನ ಹಿಂಭಾಗದಲ್ಲಿ ಕೇಂದ್ರೀಕೃತವಾಗಿದ್ದು, ಆ ಇಬ್ಬರು ಮಹಿಳೆಯರ ಸುರಕ್ಷತೆಯ ಬಗ್ಗೆ ಸ್ವಯಂ ಚೌಕಿದಾರನಂತೆ ಠಳಾಯಿಸುತ್ತಿತ್ತು. ಮುಳ್ಳಿನ ಮೇಲೆ ನಿಂತಂತೆ ಚಡಪಡಿಸುತ್ತಾ, ಹಿಂದಿನ ಸೀಟಿನ ಬಳಿ ಹೋಗಿ ಅವರ ಸಮೀಪದಲ್ಲಿ ತಾನು ಕೂಡ ಆಸೀನನಾದರೆ ಹೇಗೆ ಎಂಬ ಆಲೋಚನೆ ಅವನಿಗೆ ಮೂಡಿಬಂದಿತು. ಅದರ ಹಿನ್ನೆಲೆಯಲ್ಲಿಯೇ ತಾನು ಕಂಡು ಕೇಳರಿಯದ ಹೆಣ್ಣುಮಕ್ಕಳು ತನ್ನ ಬಗ್ಗೆ ಉಚಾಯಿಸಿ ಮಾತನಾಡಿದರೆ, ತನ್ನ ಉದ್ದೇಶದ ಬಗ್ಗೆ ತಪ್ಪು ತಿಳಿದರೆ ತನ್ನ ಮರ್ಯಾದೆಯ ಗತಿಯೇನು ಎಂಬ ಭೀತಿಯೂ ಅವನನ್ನು ಆವರಿಸಿತು. ಮರ್ಯಾದೆ ಅಂದಕೂಡಲೇ ಮಗ ಅಮ್ಜದ್ ಎದುರಾ ಎದುರು ನಿಂತು ತನಗೆ ಪಂಥಾಹ್ವಾನ ನೀಡುವ ಭಾವ ಬಲವಾಗುತ್ತಿದ್ದಂತೆ ಅವನು ಕುಳಿತಲ್ಲಿಂದ ಮಿಸುಗಲಿಲ್ಲ. ಆ ಯುವಕರತ್ತ ಅವನೊಂದು ದೃಷ್ಟಿ ಹಾಯಿಸಿದ. ಅವರು ತಾವು ಭಾಗವಹಿಸಲಿರುವ ಸಭೆಯ ಹೋರಾಟದ ಸ್ವರೂಪದ ಬಗ್ಗೆ ಚರ್ಚಿಸುತ್ತಾ ಮಾತುಕತೆಯಲ್ಲಿಯೇ ಮಗ್ನರಾಗಿದ್ದರು. ರಘು... ದೇವು... ಚಿಕ್ಕ... ಈ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಅವರು ಪೊಲೀಸರನ್ನು ಅವಾಚ್ಯವಾಗಿ ಬಯ್ಯುತ್ತಿದ್ದರು. ಅವನು ಓರೆಗಣ್ಣಿನಿಂದ ನಿರುಕಿಸಿದಾಗ ನಾಯಕ್ ಕಂಡಕ್ಟರ್‌ನೊಡನೆ ಮಾತುಕತೆಯಲ್ಲಿ ತಲ್ಲೀನನಾಗಿದ್ದ. 'ಇಲ್ಲಿನ ಜನ ಅಷ್ಟೇನೂ ಕೆಟ್ಟಿಲ್ಲ. ಇದೇನೂ ಉತ್ತರ ಭಾಗದ ಜನರಲ್ಲವಲ್ಲ. ಇಲ್ಲಿನವರಿಗೆ ನಮ್ಮವರು ತಮ್ಮವರು ಅಂತಾ ಸ್ವಲ್ಪನಾದರೂ ಇನ್ಸಾನಿಯತ್ (ಮನುಷ್ಯತ್ವ) ಇರುತ್ತಲ್ಲಾ' ಎಂದು ತನಗೆ ತಾನೇ ಸಮಾಧಾನ ಮಾಡಿಕೊಂಡ. ಸ್ವಲ್ಪ ಹೊತ್ತು ಇಡೀ ಸನ್ನಿವೇಶವನ್ನು ಗಮನಿಸಿದ ಖಲಂದರ್‌ನ ಬಿಗಿದಿದ್ದ ನರತಂತುಗಳು ಶಾಂತವಾದವು. ಅವನ ಬಿಗಿಮುಷ್ಟಿಯ ಹಿಡಿತ ಸಡಿಲವಾಯಿತು, ಎದೆಗೂಡಿನ ಲಯ ಕ್ರಮಬದ್ಧವಾಯಿತು. ನೆಮ್ಮದಿ ಅವನನ್ನು ಆವರಿಸಿ, ಅವನು ಶಾಂತಿಯನ್ನು ಅನುಭವಿಸುತ್ತಿದ್ದಂತೆ ಕಣ್ಣೆವೆಗಳು ಎಳೆದಂತಾಗಿ ನಿಧಾನವಾಗಿ ಮುಚ್ಚಿಕೊಂಡವು. ಸುಡುಬಿಸಿಲಿನ ಪ್ರಖರತೆಗೂ ಮತ್ತು ಎಂಜಿನ್ನಿನ ಸದ್ದಿಗೂ ತಾಳಮೇಳ ಕೂಡಿ ಬಂದಂತಾಗಿ ಕ್ರಮೇಣ ಅವನು ದೇಹವನ್ನು ಸಡಿಲ ಬಿಟ್ಟು ನಿದ್ರೆಗೆ ಜಾರಿದ.

ನಿದ್ರೆ ಎಂಬ ಮಾಯೆಯ ಆಳದ ಒಳ ಸುಳಿಯಲ್ಲಿ ಅವನು ಕರಗಿ ಹೋಗಿದ್ದ. ಕಾಲ, ತಿಥಿ ಸನ್ನಿವೇಶಗಳ ಪರಿವೆಯಿಲ್ಲದೆ ಅವನು ನಿದ್ರಾವಶನಾಗಿದ್ದ. ಆ ಸಂದರ್ಭದಲ್ಲಿ ನಿದ್ರೆಗೂ ಸಾವಿಗೂ ಯಾವುದೇ ವ್ಯತ್ಯಾಸ ಇರಲಿಲ್ಲ. ಅಂತಹ ದೀರ್ಘ ಮತ್ತು ಪರವಶತೆಯ ಆಲಿಂಗನದ ನಿದ್ದೆಯ ಸಂದರ್ಭದಲ್ಲಿಯೂ ಹೆಣ್ಣಿನ ತೀವ್ರ ನೋವಿನ ಯಾತನೆಯ ಮತ್ತು ಅಪಾರ ಅಸಹಾಯಕತೆಯಿಂದ ಕೂಡಿದ ಎದೆ ಕರಗುವ ಹೃದಯವಿದ್ರಾವಕವಾದ ಕೂಗೊಂದು ಅಲೆಯಲೆಯಾಗಿ ವ್ಯಾಪಿಸಿತು. ಸೀಸದ ಗೋಡೆಗಳನ್ನು ಕೂಡಾ ಹಾದು ಹೋಗುವಂತಹ ತೀವ್ರತೆ, ಬೆಟ್ಟಗಳ ಎದೆ ಸೀಳಿ ಕರುಣಾ ರಸ ಧುಮ್ಮಿಕ್ಕುವಂತಹ ಆರ್ದ್ರತೆ ಹಾಗೂ ಭೂಮಿಯ ಒಡಲು ಥರಥರನೆ ಕಂಪಿಸುವ ಬೆಂಕಿಯೊಂದಿಗೆ ಮೇಳೈಸಿದ ಆ ಆರ್ತತೆಯಿಂದ ಖಲಂದರ್ ನಡುಗಿ ಹೋದ. ಅವನ ನಿದ್ರಾಭಂಗವಾಗಿ ತಾನೆಲ್ಲಿದ್ದೇನೆ ಮತ್ತು ಏನಾಗುತ್ತಿದೆ ಎಂಬ ವಸ್ತುಸ್ಥಿತಿಯನ್ನು ಕಂಡುಕೊಳ್ಳುವುದಕ್ಕೆ ಅವನಿಗೆ ಒಂದಿಷ್ಟು ಸಮಯ ಹಿಡಿಯಿತು.